ದೇವರು ನನ್ನ ಮೂಲಕ ಮಾತಾಡಿದರೆ ಏನು ಹೇಳಬಹುದು? ಅಂತ ಕಲ್ಪಿಸಿಕೊಳ್ಳಲು ಪ್ರಯತ್ನಿಸಿದೆ. ಬಹಳ ಎಚ್ಚರಿಕೆಯಿಂದ ನಿಧಾನವಾಗಿ ಇದನ್ನು ಅರ್ಥಮಾಡಿಕೊಳ್ಳಲು ಬರೆಯಲು ಶುರುಮಾಡಿದೆ. ಅದೇ ಗದ್ಯ ಬರಹ ಕಾದಂಬರಿ. ಹಾಗಾಗಿ ಗುಮಾಸ್ತನ ರೀತಿಯಲ್ಲಿ ಕೆಲಸಮಾಡಿದೆ. ಕೆಲವು ಬರಹಗಾರರು ಇದನ್ನು ಅವಮಾನ ಅಂದುಕೊಳ್ಳುತ್ತಾರೆ. ಆದರೆ, ನಾನು ಗುಮಾಸ್ತನ ರೀತಿಯಲ್ಲಿ ಕೆಲಸಮಾಡುತ್ತೇನೆ ಎಂದು ಒಪ್ಪಿಕೊಳ್ಳುತ್ತೇನೆ.

**◆ ಅಂದರೆ, ಕಾಲಕಳೆದಂತೆ ಗದ್ಯ ಬರೆಯುವುದು ನಿಮಗೆ ಸುಲಭ ಅನ್ನಿಸಿದೆಯೇ?**

ದುರದೃಷ್ಟವಶಾತ್ ಇಲ್ಲ. ಕೆಲವೊಮ್ಮೆ ನನ್ನ ಪಾತ್ರ ರೂಮಿನೊಳಗೆ ಹೋಗಬೇಕು ಆದರೆ ಅವನು ಒಳಗೆ ಹೋಗಲು ಏನು ಮಾಡಬೇಕು ಎನ್ನುವುದೇ ತೋಚುವುದಿಲ್ಲ. ನನಗೆ ಆತ್ಮವಿಶ್ವಾಸ ಹೆಚ್ಚಿರಬಹುದು, ಅದರಿಂದೇನೂ ಸಹಾಯವಾಗುವುದಿಲ್ಲ. ಯಾಕೆಂದರೆ, ಆಗ ನೀವು ಪ್ರಯೋಗಶೀಲರಾಗುವುದಿಲ್ಲ, ಸುಮ್ಮನೆ ನಿಮ್ಮ ಪೆನ್ನು ಬರೆದದ್ದನ್ನು ಬರೆದಿರುತ್ತೀರಿ. ಕಳೆದ ಮೂವತ್ತು ವರ್ಷಗಳಿಂದ ಕಾದಂಬರಿ ಬರೆಯುತ್ತಿದ್ದೇನೆ. ಅಂದಮೇಲೆ ಸ್ವಲ್ಪ ಮಟ್ಟಿಗೆ ಬರವಣಿಗೆಯಲ್ಲಿ ಸುಧಾರಿಸಿದ್ದೇನೆ ಅಂದುಕೊಳ್ಳಬಹುದು. ಆದರೂ ಕೆಲವೊಮ್ಮೆ ಇದೇ ಕೊನೆ ಇನ್ನು ಬರೆಯಲಾಗುವುದಿಲ್ಲ ಅನ್ನಿಸುತ್ತದೆ. ಪಾತ್ರ ರೂಮೊಳಗೆ ಹೋಗಲಾಗುವುದಿಲ್ಲ, ಏನು ಮಾಡಬೇಕೆಂದು ತೋಚುವುದಿಲ್ಲ. ಆದರೂ ಮೂವತ್ತು ವರ್ಷಗಳು!!

ನನ್ನ ಆಲೋಚನೆ ಸರಾಗವಾಗಿ ಸಾಗಲು ಪುಸ್ತಕವನ್ನು ಅಧ್ಯಾಯಗಳಾಗಿ ವಿಭಜಿಸಿಕೊಳ್ಳುತ್ತೇನೆ. ಇದು ನನಗೆ ಬಹಳ ಮುಖ್ಯ. ಕಾದಂಬರಿಯನ್ನು ಬರೆಯುವಾಗ ಕತೆ ಏನು ಎನ್ನುವುದು ನನಗೆ ಮೊದಲೇ ಗೊತ್ತಿರುತ್ತದೆ. ಅದನ್ನು ಅಧ್ಯಾಯಗಳಾಗಿ ಮೊದಲು ವಿಭಜಿಸಿಕೊಳ್ಳುತ್ತೇನೆ. ಆಮೇಲೆ ಅವುಗಳಲ್ಲಿನ ವಿವರಗಳ ಕುರಿತು ಯೋಚಿಸುತ್ತೇನೆ. ಬರೆಯುವಾಗ ಮೊದಲನೇ ಅಧ್ಯಾಯದಿಂದ ಶುರುಮಾಡಿ ಕ್ರಮವಾಗಿ ಬರೆಯುತ್ತೇನೆ ಎಂದೇನಿಲ್ಲ. ಏನು ಮಾಡಬೇಕೆಂದು ತೋಚದೆ ಹೋದಾಗ ಸುಮ್ಮನೆ ಕಲ್ಪನೆ ಸಾಗಿದಂತೆ ಬರೆಯುತ್ತಾ ಹೋಗುತ್ತೇನೆ. ಮೊದಲನೇ ಅಧ್ಯಾಯದ ಅನಂತರ ಐದನೇ ಅಧ್ಯಾಯ ಬರೆಯಬಹುದು. ಆ ಅಧ್ಯಾಯದ ಬರವಣಿಗೆ ಖುಷಿ ಕೊಡದಿದ್ದರೆ ಹದಿನೈದನೇ ಅಧ್ಯಾಯಕ್ಕೆ ಹಾರಿ ಅಲ್ಲಿಂದ ಮುಂದುವರೆಸಬಹುದು.

**◆ ಅಂದರೆ, ಇಡೀ ಪುಸ್ತಕದ ರೂಪುರೇಷೆ ಮೊದಲೇ ನಿರ್ಧರಿಸುತ್ತಿರಿ?**

ಹೌದು. ಉದಾಹರಣೆಗೆ 'ಮೈ ನೇಮ್ ಇಸ್ ರೆಡ್'ನಲ್ಲಿ ಹಲವು ಪಾತ್ರಗಳಿದ್ದವು. ಪ್ರತಿಯೊಂದಕ್ಕೂ ಒಂದಿಷ್ಟು ಅಧ್ಯಾಯಗಳನ್ನು ನಿರ್ಧರಿಸಿದ್ದೆ. ಬರೆಯುವಾಗ ಒಮ್ಮೊಮ್ಮೆ ಯಾವುದಾದರೂ ಒಂದು 'ಪಾತ್ರವೇ' ಆಗಿಬಿಡಬೇಕೆಂದು ಅನ್ನಿಸುತ್ತಿತ್ತು. ಶೆಕುರೆಯ ಅಧ್ಯಾಯಗಳನ್ನು ಬರೆದಾದ ಮೇಲೆ ಬಹುಶಃ ಏಳನೆಯ ಅಧ್ಯಾಯವಿರಬೇಕು, ಹನ್ನೊಂದನೆಯದನ್ನು ಬಿಟ್ಟೆ. ಅದು ಮತ್ತೆ ಅವಳ ಕುರಿತ ಅಧ್ಯಾಯವಾಗಿತ್ತು. ನನಗೆ ಶೆಕುರೆಯಾಗಿರುವುದು ಇಷ್ಟವಾಗುತ್ತಿತ್ತು. ಒಂದು ಪಾತ್ರದಿಂದ ಹೊರಬಂದು ಮತ್ತೊಂದರ ಪ್ರವೇಶ ಮಾಡಬೇಕೆಂದಾಗ ದುಃಖವಾಗಬಹುದು. ಕೊನೆಯ ಅಧ್ಯಾಯವನ್ನು ಮಾತ್ರ ಯಾವಾಗಲೂ ಕೊನೆಯಲ್ಲಿಯೇ ಬರೆಯುತ್ತೇನೆ. ಕೊನೆ ಏನು ಅಂತ ನನ್ನನ್ನೇ ನಾನು ಪ್ರಶ್ನಿಸಿಕೊಳ್ಳಲು, ಹಂಗಿಸಿಕೊಳ್ಳಲು ಇಷ್ಟಪಡುತ್ತೇನೆ. ಕಾದಂಬರಿಯನ್ನು ಮುಗಿಸುವ ಮೊದಲು ಬರೆದ ಎಲ್ಲ ಅಧ್ಯಾಯಗಳನ್ನು ಮತ್ತೊಮ್ಮೆ ತಿದ್ದಿ ಬರೆಯುತ್ತೇನೆ.

**◆ ನೀವು ಬರೆಯುವಾಗ ಯಾರಿಗಾದರೂ ಓದಲು ಕೊಡುವಿರಾ?**